# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 708 |
| ಸದಸ್ಯರ ಹೆಸರು | ಶ್ರೀ ಗೋವಿಂದರಾಜು (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ: | 21.02.2024 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕೋಲಾರ ಜಿಲ್ಲೆಯ ಸರ್ವೇ ಇಲಾಖೆಯಲ್ಲಿ ಶೇ. 50 ಕ್ಕಿಂತ ಹೆಚ್ಚು ಹುದ್ದೆಗಳು ಖಾಲಿ ಇರುವುದು ನಿಜವೇ; | ಕೋಲಾರ ಜಿಲ್ಲೆಯಲ್ಲಿ ಸರ್ವೇ ಇಲಾಖೆಯಲ್ಲಿನ ಹುದ್ದೆಗಳ ವಿವರ ಈ ಕೆಳಕಂಡಂತೆ ಇರುತ್ತದೆ. (see table below) |
| ಆ) | ಹುದ್ದೆಗಳು ಖಾಲಿ ಇರುವುದರಿಂದ ವಿವಿಧ ಹಂತದ ಸುಮಾರು 10 ಸಾವಿರ ಕಡತಗಳ ವಿಲೇವಾರಿಯಾಗದೇ ನೆನೆಗುದಿಗೆ ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | **" ಬಂದಿದೆ"** |
| ಇ) | ಜಿಲ್ಲೆಯ 6 ತಾಲ್ಲೂಕುಗಳಲ್ಲಿ ವಿವಿಧ ರೀತಿಯ ಪೋಡಿ ಪ್ರಕರಣ ವಿಲೇವಾರಿಗಾಗಿ ಬಾಕಿ ಇದ್ದರೂ ಸಹ ಸಿಬ್ಬಂದಿಗಳನ್ನು ವರ್ಗಾವಣೆ ಮಾಡುತ್ತಿರುವ ಉದ್ದೇಶವಾದರೂ ಏನು: | ಸಾರ್ವಜನಿಕ ಹಾಗೂ ಆಡಳಿತ ಹಿತದೃಷ್ಟಿಯಿಂದ ಹಾಗೂ ಕೆಲವೊಂದು ನೌಕರರ ಕೋರಿಕೆ ಮೇರೆಗೆ ವರ್ಗಾವಣೆ ಮಾಡಲಾಗಿರುತ್ತದೆ. |

| ಕ್ರ. ಸಂ | ಹುದ್ದೆ | ಮಂ | ಭರ್ತಿ | ಖಾಲಿ |
|---|---|---|---|---|
| 1 | ಭೂ.ಉ.ನಿ | 01 | 01 | 00 |
| 2 | ಭೂ.ಸ.ನಿ | 05 | 03 | 02 |
| 3 | ಸ.ನಿ(ಆ) | 01 | 01 | 00 |
| 4 | ಅಧೀಕ್ಷಕರು(ಕಾ.ನಿ) | 05 | 03 | 02 |
| 5 | ತಪಾಸಕರು | 18 | 06 | 12 |
| 6 | ಭೂಮಾಪಕರು | 87 | 52 | 35 |
| 7 | ಅಧೀಕ್ಷಕರು(ಆ) | 01 | 01 | 00 |
| 8 | ಪ್ರ.ದ.ಸ | 04 | 03 | 01 |
| 9 | ದ್ವಿ.ದ.ಸ | 02 | 01 | 01 |
| 10 | ದತ್ತಾಂಶ ನಮೂದು ಸಹಾಯಕರು | 01 | 00 | 01 |
| 11 | ವಾಹನ ಚಾಲಕ | 01 | 00 | 01 |
| 12 | ಗ್ರೂಪ್-"ಡಿ" | 72 | 27 | 45 |
| | ಒಟ್ಟು | **198** | **98** | **100** |

| | | |
|---|---|---|
| ಈ) | ರೈತರ ಸಮಸ್ಯೆಯನ್ನು ಶೀಘ್ರವಾಗಿ ಬಗೆಹರಿಸಲು ಹಾಗೂ ಬಾಕಿ ಇರುವ ಕಡತಗಳನ್ನು ತ್ವರಿತವಾಗಿ ವಿಲೇವಾರಿ ಮಾಡಲು ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳಲು ಎಷ್ಟು ಕಾಲಾವಧಿ ಬೇಕಾಗಿದೆ; | 1. ಕೋಲಾರ ಮತ್ತು ಶ್ರೀನಿವಾಸಪುರ ತಾಲ್ಲೂಕಿನಲ್ಲಿ ಭೂದಾಖಲೆಗಳ ಸಹಾಯಕ ನಿರ್ದೇಶಕರ ಹುದ್ದೆಗಳು ಖಾಲಿ ಇದ್ದು, ಈ ಹುದ್ದೆಗಳಿಗೆ ಅಧೀಕ್ಷಕರು (ಕಾ.ನಿ) ಇವರನ್ನು ಪ್ರಭಾರದಲ್ಲಿರಿಸಿ ಸಾರ್ವಜನಿಕರ ಕೆಲಸಗಳಿಗೆ ಯಾವುದೇ ಸಮಸ್ಯೆಯಾಗದಂತೆ ಕೆಲಸ ನಿರ್ವಹಿಸಲಾಗುತ್ತಿದೆ.<br>2. ಖಾಲಿ ಇರುವ ಹುದ್ದೆಗಳ ಪೈಕಿ ಮುಂಬಡ್ತಿ ಮೂಲಕ ಭರ್ತಿ ಮಾಡಬೇಕಾಗಿರುವ ಹುದ್ದೆಗಳನ್ನು ಮುಂಬಡ್ತಿ ನೀಡಿ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.<br>3. ಭೂಮಾಪನ ಇಲಾಖೆಯಲ್ಲಿ ಖಾಲಿ ಇರುವ 264 ಉಳಿಕೆ ಮೂಲ ವೃಂದದ ಮತ್ತು 100 ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದ ಒಟ್ಟು 364 ಭೂಮಾಪಕರ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರವು ತೀರ್ಮಾನಿಸಿದೆ. ಈ ಹುದ್ದೆಗಳಲ್ಲಿ ಅಂಗವಿಕಲ ಮೀಸಲಾತಿಯನ್ನು ಅಳವಡಿಸಿಕೊಂಡು ನೇಮಕಾತಿ ಪ್ರಕ್ರಿಯೆ ಕೈಗೊಳ್ಳಲು ಕರ್ನಾಟಕ ಲೋಕಸೇವಾ ಆಯೋಗಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಆಯ್ಕೆ ಪಟ್ಟಿ ಸ್ವೀಕೃತವಾದ ನಂತರ ನೇಮಕಾತಿಗೆ ಕ್ರಮ ಕೈಗೊಳ್ಳಲಾಗುವುದು.<br>4. 2023ನೇ ಸಾಲಿನಲ್ಲಿ 2000 ಪರವಾನಗಿ ಭೂಮಾಪಕರುಗಳ ಆಯ್ಕೆಗೆ ಅಧಿಸೂಚನೆ ಹೊರಡಿಸಲಾಗಿದ್ದು, 1405 ಅಭ್ಯರ್ಥಿಗಳಿಗೆ ವೃತ್ತಿ ಬುನಾದಿ ತರಬೇತಿ ನೀಡಿಡಲಾಗಿದೆ. ಈ ಪೈಕಿ ಉತ್ತೀರ್ಣರಾದ 991 ಅಭ್ಯರ್ಥಿಗಳಿಗೆ ದಿನಾಂಕ:6-2-2024 ಮತ್ತು 7-2-2024 ರಂದು ಕೌನ್ಸಲಿಂಗ್ ನಡೆಸಿದ್ದು, ತಾಲ್ಲೂಕುವಾರು 991 ಪರವಾನಗಿ ಭೂಮಾಪಕರ ಪೈಕಿ ಕೋಲಾರದಲ್ಲಿ 22 ಪರವಾನಗಿ ಭೂಮಾಪಕರನ್ನು ಸ್ಥಳ ನಿಯುಕ್ತಿಗೊಳಿಸಲಾಗುತ್ತಿದೆ.<br><br>ಪ್ರಸ್ತುತ ಇಲಾಖೆಯಲ್ಲಿ ಲಭ್ಯವಿರುವ ಭೂಮಾಪಕರು ಹಾಗೂ ಪರವಾನಗಿ ಭೂಮಾಪಕರ ಸೇವೆಯನ್ನು ಬಳಸಿಕೊಂಡು ಸಾರ್ವಜನಿಕರಿಗೆ ತೊಂದರೆ ಆಗದಂತೆ ಕ್ರಮ ಕೈಗೊಳ್ಳಲಾಗುತ್ತಿದೆ. |
| ಉ) | ಬೆಂಗಳೂರು ನಗರ, ಗ್ರಾಮಾಂತರ ಜಿಲ್ಲೆಗಳಲ್ಲಿ ಸರ್ವೆ ಇಲಾಖೆಯಲ್ಲಿ ಶೇಕಡಾ 100 ರಷ್ಟು ಹುದ್ದೆಗಳು ಭರ್ತಿಯಾಗಿದ್ದು, ಇನ್ನುಳಿದ ಜಿಲ್ಲೆಗಳಲ್ಲಿ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | **" ಬಂದಿದೆ "**<br>ಪ್ರಶ್ನೆ ಸಂಖ್ಯೆ (ಈ) ರಲ್ಲಿ ತಿಳಿಸಿರುವಂತೆ ಭೂಮಾಪಕರ ನೇಮಕಾತಿ ಸಮಯದಲ್ಲಿ ಹಾಗೂ ಪರವಾನಗಿ ಭೂಮಾಪಕರ ಸ್ಥಳನಿಯುಕ್ತಿ ಸಮಯದಲ್ಲಿ ಇನ್ನುಳಿದ ಜಿಲ್ಲೆಗಳಿಗೆ ಆದ್ಯತೆ ಮೇಲೆ ಸ್ಥಳನಿಯುಕ್ತಿಗೊಳಿಸಲಾವುದು. |

<u>ಸಂಖ್ಯೆ: ಕಂಇ 39 ಎಸ್‌ಎಸ್‌ಸಿ 2024</u>

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು